ಶ್ರೀ ಎಂ.ಸಿ. ನಾಣಯ್ಯ :- ಸನ್ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಸರ್ಕಾರದ ಮಟ್ಟದಲ್ಲಿ ಮತ್ತು ಕೆಇಬಿ ಮಟ್ಟದಲ್ಲಿ ಒಂದು ಚರ್ಚೆ ಮಾಡಿ, ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದಕ್ಕೆ ಎಲ್ಲರ ಸಹಕಾರವನ್ನು ಸಹ ನಾನು ಕೇಳುತ್ತೇನೆ. ನಾವೆಲ್ಲರೂ ಸೇರಿ ಇದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳೋಣ.

ಅಧ್ಯಕ್ಷರು :- ಶ್ರೀಮತಿ ಪ್ರಮೀಳಾ ನೇಸರ್ಗಿ ಅವರು ಬಂಬೂ ಬಜಾರಿನಲ್ಲಿ ಆದ ಬೆಂಕಿ ಅನಾಹುತದ ಬಗ್ಗೆ ತಿಳಿಸಿ.

(ಎ) <u>ಬೆಂಗಳೂರಿನ ಸಿಟಿ ಮಾರ್ಕೆಟ್ಟಿನ ಬಳಿ ಇರುವ ಬಂಬೂ ಬಜಾರ್‌ನಲ್ಲಿ ಬೆಂಕಿ ಅನಾಹುತ.</u>

★ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜ ಪೇಟೆ) :- ಸನ್ಮಾನ್ಯ ಅಧ್ಯಕ್ಷರೆ, ಚಾಮರಾಜ ಪೇಟೆ ಕ್ಷೇತ್ರದಲ್ಲಿ ಸಿಟ್ಟಿ ಮಾರ್ಕೆಟ್ ಹತ್ತಿರವಿರುವ ಬಂಬೂ ಬಜಾರ್ ಬಹಳ ಜನನಿಬಿಡವಾದಂತಹ ಸ್ಥಳ. ಅಲ್ಲಿ ಈ ಬೆಂಕಿ ಅನಾಹುತ ಆಗಿರುವುದು ಇದು 6ನೆಯ ಭಾರಿ. ಒಂದು ಸಾರಿ ಬೆಂಕಿ ಅನಾಹುತದಲ್ಲಿ ಫೈರ್ ಬ್ರಿಗೇಡ್ ಆಫೀಸರ್ ಸಹ ಸತ್ತಿದ್ದಾರೆ. ಆದರೂ ಸಹ ಇದರ ಬಗ್ಗೆ ಯಾವುದೇ ರೀತಿಯಾದಂತಹ ಪ್ರಿಕಾಷನರಿ ಸ್ಟೆಪ್ ತೆಗೆದುಕೊಂಡಿಲ್ಲ. ಕಳೆದ ಗುರುವಾರದಂದು ಸಾಯಂಕಾಲ ಎಂಟೂವರೆ ಗಂಟೆಯ ಸಮಯದಲ್ಲಿ ಹೊತ್ತಿಕೊಂಡಂತಹ ಬೆಂಕಿ ಎರಡು ಅಂಗಡಿಗಳನ್ನು ಸುಟ್ಟಿದೆ. ಆದರೆ ಇದರ ಬಗ್ಗೆ ಯಾರೂಸಹ ಗಮನ ಪರಿಸ್ಥಿತಿ ಮುಂದುವರೆದಿದೆ ಮುಂಬರುವ ಮಾರ್ಚ್ ಮತ್ತು ಏಪ್ರಿಲ್‌ನಲ್ಲಿ ಬೇಸಿಗೆ ಕಾಲದಲ್ಲಿ ಪುನ: ಬೆಂಕಿ ಅನಾಹುತ ಆಗುವಂತಹ ಸಂದರ್ಭ ಇದೆ. ನಾನು ಈಗಾಗಲೇ ಇದನ್ನು ಶಿಫ್ಟ್ ಮಾಡಿ ಎಂದು ಕೇಳಿದ್ದೆ. ಇಲ್ಲಿ ಇರುವಂತಹ ಎಲ್ಲಾ ವ್ಯಾಪಾರಸ್ಥರಿಗೂ 5 ಎಕರೆ ಜಾಗವನ್ನು ಬೇರೆ ಎಲ್ಲಾದರೂ ಕೊಟ್ಟರೆ, ಬಹುಶ: ಅವರು ಶಿಫ್ಟ್ ಮಾಡುವುದಕ್ಕೆ ತಯಾರಿದ್ದಾರೆ. ಎಲ್ಲಾ ವ್ಯಾಪಾರಸ್ಥರೂ ಕೂಡ ಒಂದು ಮೀಟಿಂಗ್ ಮಾಡಿ, ನಾವು ಹೋಗುವುದಕ್ಕೆ ತಯಾರಿದ್ದೇವೆ, ಅದಕ್ಕೆ ಅವಕಾಶ ಮಾಡಿಕೊಡಿ ಎಂದು ಕೇಳಿದ್ದಾರೆ. ಆದರೆ ಆ ಕ್ರಮವನ್ನೂ ಸಹ ತೆಗೆದುಕೊಂಡಿಲ್ಲ. ಅಲ್ಲಿ ಎನಾಗಿದೆ ಅಂದರೆ, ಪಕ್ಕದಲ್ಲಿ ಇರುವಂತಹ ಹೋಟೆಲ್‌ಗಳಲ್ಲಿ ಆರಿಸದೇ ಇರುವಂತಹ ಕೆಂಡಗಳನ್ನು ತಂದು ಅಲ್ಲೇ ಹಾಕುತ್ತಾರೆ. ಅಲ್ಲಿ ತೊಟ್ಟಿ ಇದ್ದುದ್ದನ್ನೂ ಸಹತೆಗೆದು ಹಾಕಿದ್ದಾರೆ; ಆದರಿಂದ ಬೆಂಕಿ ಅನಾಹುತವಾಗಿದೆ ಎಂದು ಹೇಳಿದ್ದಾರೆ. ಅಷ್ಟೇ ಅಲ್ಲ, ಅಲ್ಲಿ ಒಂದು ಸಾರಾಯಿ ಅಂಗಡಿ ಇದೆ. ಜನ ಆ ಸಾರಾಯಿ ಅಂಗಡಿಯಲ್ಲಿ ಕುಡಿದು, ರೋಡಿನಲ್ಲಿ ಉರುಳಿಕೊಂಡು ಬಂದು ಈ ಬಂಬೂ ಬಜಾರಿನಲ್ಲಿ ಬೀಳುತ್ತಾರೆ. ಈ ಬೊಂಬು ಬಜಾರ್ ಪಕ್ಕದಲ್ಲೇ 10- 12 ಮೊಬೈಲ್ ಕ್ಯಾಂಟೀನ್‌ಗಳು ಇವೆ. ಅಲ್ಲೇ ಸೀಮೆ ಎಣ್ಣೆ ಇಟ್ಟು ಕೊಂಡು ವ್ಯಾಪಾರ ಮಾಡುತ್ತಾರೆ. ಇದರಿಂದ ಪರಿಸ್ಥಿತಿ ಏನಾಗಿದೆ ಎಂದರೆ, ಈ ರೋಡಿನಲ್ಲಿ ಕ್ಲೀನ್ ಲೀನೆಸ್ ಇಲ್ಲ, ವಾಟರ್ ಕನೆಕ್ಷನ್ ಎಲ್ಲವನ್ನೂ ಕ್ಲೋಸ್ ಮಾಡಿದ್ದಾರೆ. ಆದುದರಿಂದ ಈ ಪರಿಸ್ಥಿತಿ ಉಂಟಾಗಿದೆ. ಆದುದರಿಂದ ಈ ಸರ್ಕಾರ ಗಮನ ಹರಿಸಿ ಇದನ್ನು ಪರಿಹರಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತಾರೆ, ಯಾವ ರೀತಿ ಮಾಡುತ್ತಾರೆ ಎಂಬುದನ್ನು ತಿಳಿಸಬೇಕು. ಸನ್ಮಾನ್ಯ ರೋಷನ್ ಬೇಗ್ ಅವರು ಕಳೆದ ಬಾರಿ ಬಂದಿದ್ದರು. ಆದರೆ ಮೊನ್ನೆ ದಿವಸ ಬೆಂಕಿ ಅನಾಹುತ ಆದಾಗ ಬರಲಿಲ್ಲ, ಕಾರಣ ತಿಳಿಯಲಿಲ್ಲ. ಸನ್ಮಾನ್ಯ ಅನಂತ್‌ನಾಗ್ ಅವರು ಸಹ ಬರಲಿಲ್ಲ. ರಾತ್ರಿ ಹನ್ನೆರಡು ಗಂಟೆಯ ಸಮಯದಲ್ಲಿ ನಾನು ಹೋಗಿದ್ದೆ, ತಕ್ಷಣ ಫೈರ್ ಬ್ರಿಗೇಡ್‌ನವರು ಬಂದು ಆ ಬೆಂಕಿಯನ್ನು ಆರಿಸದೇ ಹೋಗಿದ್ದರೆ ಅಲ್ಲಿ ಇನ್ನು ಸುಮಾರು 50 ಅಂಗಡಿಗಳವರೆವಿಗೆ ಆ ಬೆಂಕಿ ಬರುತ್ತಿತ್ತು.

ಅಧ್ಯಕ್ಷರು :- ಯಾವ ಸಮಯದಲ್ಲಿ ಬೆಂಕಿ ಬಿದ್ದಿದ್ದು?

ಶ್ರೀಮತಿ ಪ್ರಮೀಳಾ ನೇಸರ್ಗಿ :- ರಾತ್ರಿ ಸಮಯದಲ್ಲಿ, ನಾನು ಸುಮಾರು ರಾತ್ರಿ ಹನ್ನೆರಡೂವರೆ ಗಂಟೆಯವರೆವಿಗೂ ಅಲ್ಲೇ ಇರಬೇಕಾಗಿ ಬಂತು. ಆ ಸಮಯದಲ್ಲಿ ಫೈರ್ ಬ್ರಿಗೇಡ್‌ನವರು ಬಹಳ ಚೆನ್ನಾಗಿ ಕೆಲಸ ಮಾಡಿದರು. ಇಷ್ಟಾದರೂ ಕಾರ್ಪೊರೇಷನ್‌ನವರು ಏನೂ ಕ್ರಮ ತೆಗೆದುಕೊಂಡಿಲ್ಲ. ಟ್ರಾಫಿಕ್‌ನವರು ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿಲ್ಲ. ಇದರ ಪರಿಸ್ಥಿತಿ ಬಿಗಡಾಯಿಸುವ ಮುಂಚೆ ಪೋಲೀಸರು ಏನಾದರೂ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಸಿ ನಾಣಯ್ಯ :- ಸಭಾಧ್ಯಕ್ಷರೇ, ಇದೊಂದು ನೀತಿಯ ಪ್ರಶ್ನೆ. ಬಂಬೂಬಜಾರ್ ಬಹಳ ಇಕ್ಕಟ್ಟಾಗಿರುವುದು, ಆಗಿಂದಾಗ್ಗೆ ಅಲ್ಲಿ ಬೆಂಕಿ ಅನಾಹುತವಾಗುತ್ತಿರುವುದೂ ಗಮನಕ್ಕೆ ಬಂದಿದೆ. ಬಿಸಿಸಿ ಮತ್ತು ಬಿಡಿಎ ಎಲ್ಲರೂ ಸೇರಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗಿದೆ. ಈ ಜಾಗವನ್ನು ಶಿಫ್ಟ್ ಮಾಡುವುದಕ್ಕೆ ಮೊದಲು ಬಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಬಿಡಿಎ ಮಂತ್ರಿ ಇದ್ದಾರಲ್ಲಾ...

ಶ್ರೀ ಅನಂತನಾಗ್ :- ಅಧ್ಯಕ್ಷರೇ, ಮಾನ್ಯ ಸದಸ್ಯರು ಗಮನಕ್ಕೆ ತಂದಿದ್ದಾರೆ. ತಕ್ಷಣ ನಾನು ಪರಿಶೀಲನೆ ಮಾಡಿ ಅಲ್ಲೇನು ತೊಂದರೆ ಇದೆ ಅದನ್ನು ನಿವಾರಿಸುವ ಪ್ರಯತ್ನ ಮಾಡುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ :- ಐದು ಎಕರೆ ಜಾಗ ತೆಗೆದುಕೊಂಡು ಇದರ ಬಗ್ಗೆ ಪರ್ಮನೆಂಟ್ ಆಗಿ ವ್ಯವಸ್ಥೆ ಏನಾದರೂ ಮಾಡುತ್ತಾರೆಯೇ ?

Mr. Speaker :- The learned Minister of Law and Parliamentary Affairs will look into this matter with special interest because you are his class-mate.

(ಐ) <u>ಮಾಜಿ ಸಚಿವರ ಆಸ್ತಿಯನ್ನು ಹರಾಜುಹಾಕುವ ಬಗ್ಗೆ</u> :-

★ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :- ಅಧ್ಯಕ್ಷರೇ, ಇವತ್ತಿನ ಪರಿಸ್ಥಿತಿಯಲ್ಲಿ ಒಂದು ರೀತಿಯಲ್ಲಿ ಈ ಸಮಾಜದಲ್ಲಿ ಎಲ್ಲರೂ ಬಹಳ ಸತ್ಯವಂತರು ಪ್ರಾಮಾಣಿಕರು ನಂಬಿಕೆಗೆ ಇರುವವರು, ಆದರೆ ರಾಜಕಾರಣಿ ಎಂ ಎಲ್ ಎ ಆಗಿರಬಹುದು ಮಂತ್ರಿ ಆಗಿರಬಹುದು- ಅದಾದ ತಕ್ಷಣವೇ ಆತ ಅಗೌರವದ ವ್ಯಕ್ತಿ, ಬಹಳ ಸಣ್ಣತನದಲ್ಲಿ ನೋಡುವ ಸಮಾಜ, ಅತ್ಯಂತ ಕೆಟ್ಟ ಪರಿಣಾಮ ಇದರ ಜೊತೆಗೆ ಸಮಾಜಿಕವಾಗಿ ನೋಡಿದಾಗ ಜನರಲ್ಲೂ ರಾಜಕಾರಣಿ ಅಂದ ತಕ್ಷಣ ಇವನು ಬಹಳ ಕೆಟ್ಟ ಮನುಷ್ಯನಪ್ಪ, ದೇಶ ಲೂಟಿ ಮಾಡುವವನು, ಭ್ರಷ್ಟಚಾರ ಮಾಡುವವನು, ಹುಟ್ಟಿಸುವಂಥಾದ್ದು ಇತ್ತೀಚಿನ ವರ್ಷಗಳಲ್ಲಿ ನಾನು ಬಹಳ ಜನ ನೋಡಿದ್ದೇನೆ. ಕೆ.ಸಿ. ರೆಡ್ಡಿಯವರ ಕಾಲದಿಂದ ಈ ರಾಜ್ಯದ ರಾಜಕಾರಣವನ್ನು ನಾನು ನೋಡಿದ್ದೇನೆ. ಇತ್ತೀಚೆಗೆ ಕೆಲವು ಮಾಜಿ ಶಾಸಕರಿಗೆ ಮಾಜಿ ಸಚಿವರಿಗೆ ತಾವು ಕೊಠಡಿಯನ್ನು ಬಿಡುವಾಗ ಅನೇಕ ಸಂದರ್ಭದಲ್ಲಿ ಹಣವನ್ನು ಕೊಡದೆ ಸರ್ಕಾರಕ್ಕೆ ಭಾರಿ ಮೋಸ ಮಾಡಿದ್ದೀರಿ ಎಂಬ ರೀತಿಯಲ್ಲಿ ಬಹಿರಂಗ ಹರಾಜು ಪ್ರಕಟಣೆಯನ್ನು ಜಾರಿ ಮಾಡಿದ್ದಾರೆ. ಯಾರ್ಯಾರಿಗೆ ಮಾಡಿದ್ದಾರೆ? ಮಾಜಿ ಮಂತ್ರಿಗಳಿಗೆ, ಮಾಜಿ ಮುಖ್ಯಮಂತ್ರಿಗಳಿಗೆ ಮಾಜಿ ಶಾಸಕರಿಗೆ. 15-3-58 ರಲ್ಲಿ ಬಹಿರಂಗ ಹರಾಜು ಪ್ರಕಟಣೆ. ನೋಟೀಸು. ಎಲ್ಲರಿಗೂ ಆಯಾ ಸಂದರ್ಭಗಳಲ್ಲಿ ನೋಟೀಸು ಜಾರಿಮಾಡಿದ್ದಾರೆ. ಉದಾಹರಣೆಗೆ ನೋಟೀಸು ಕೊಡಬೇಕಾದರೆ ಮೊದಲು ಇವರುಗಳು ಹಣವನ್ನು ಕೊಡಬೇಕೇ ಬಿಡಬೇಕೇ ಎಂದು ಕೇಳುವುದು, ಸರ್ಕಾರದಿಂದಾಗಲಿ ಯಾರಿಂದಾಗಲಿ,